(ಧರ್ಮವಿಲ್ಲದ ವಿಜ್ಞಾನ ಕುರುಡು, ವಿಜ್ಞಾನವಿಲ್ಲದ ಧರ್ಮ ಕುಂಟು) ಧರ್ಮಕ್ಕೆ ವೈಜ್ಞಾನಿಕ ದೃಷ್ಟಿಯನ್ನೂ, ವಿಜ್ಞಾನಕ್ಕೆ ಧಾರ್ಮಿಕ ಸಂಸ್ಕಾರವನ್ನೂ ಕೊಟ್ಟಾಗ ಈ ಎರಡೂ ಒಂದರಿಂದೊಂದು ಪುಷ್ಟಿಗೊಳ್ಳುತ್ತದೆ. ಈ ವೈಚಾರಿಕ ವಿವೇಚನೆಯನ್ನು ಶರಣರ ವಚನಗಳುದ್ದಕ್ಕೂ ಕಂಡುಕೊಳ್ಳಬಹುದು.

ಆದ್ದರಿಂದಲೇ ಒಂದು ಸಾಹಿತ್ಯ ಕೃತಿಯ ಅಧ್ಯಯನವೆಂಬುದು ಅಲ್ಲಿ ಹುದುಗಿರುವ ವ್ಯಕ್ತಿಶೋಧ, ಸಮಾಜಶೋಧ, ಮೌಲ್ಯಾದರ್ಶಶೋಧ ಮತ್ತು ಸೌಂದರ್ಯ ಶೋಧದೊಂದಿಗೆ ವೈಜ್ಞಾನಿಕ ಮನೋದೃಷ್ಟಿ ಅತ್ಯಂತ ಮಹತ್ವದ್ದಾಗಿ ತೋರುತ್ತದೆ. ವೈಜ್ಞಾನಿಕ ಮನೋದೃಷ್ಟಿ ಪ್ರಕಾರ ಯಾವುದೇ ನಂಬಿಕೆ ಅಥವಾ ಅಭಿಪ್ರಾಯ ಪ್ರಾಯೋಗಿಕ ಪುರಾವೆಗಳ ಆಧಾರದ ಮೇಲೆ ನಿಂತಿರಬೇಕು. ಪ್ರಾಯೋಗಿಕ ಪುರಾವೆಗಳು ವೈಜ್ಞಾನಿಕ ಸಿದ್ಧಾಂತಗಳನ್ನು ದೃಢೀಕರಿಸುತ್ತವೆ. ಇಂತಹ ಸಿದ್ಧಾಂತಗಳು ವಿಜ್ಞಾನಿಗಳಿಂದ ಮನ್ನಣೆ ಪಡೆಯುತ್ತವೆ. ನಿಸರ್ಗದಲ್ಲಾಗುವ ಎಲ್ಲ ಕ್ರಿಯೆಗಳ ಬಗ್ಗೆ ತಿಳಿದುಕೊಳ್ಳಲು ಸಹಾಯಕವಾಗುತ್ತವೆ. ಸಿದ್ಧಾಂತಗಳಲ್ಲಿರುವ ನ್ಯೂನ್ಯತೆಗಳನ್ನು ತೆಗೆದು ಹಾಕಲು ಮತ್ತು ಹೊಸ ವಿಚಾರಗಳನ್ನು ಹುಟ್ಟುಹಾಕಲು ವಿಜ್ಞಾನ ಲೋಕದಲ್ಲಿ ಅವಕಾಶವಿದೆ. ಪುರಾವೆಗಳ ಮೇಲೆ ಗಟ್ಟಿಯಾಗಿ ನಿಂತ ಸಿದ್ಧಾಂತಗಳು, ಸತ್ಯ ಮತ್ತು ಸೌಂದರ್ಯ ಎರಡನ್ನೂ ಒಳಗೊಂಡಿರುತ್ತವೆ.

ಈ ನೆಲೆಯಲ್ಲಿ 'ಶರಣರ, ಸರ್ವಜ್ಞನ ಮತ್ತು ವೇಮನರ ವಚನಗಳಲ್ಲಿ ವೈಜ್ಞಾನಿಕತೆ' ಎಂಬ ವಿಷಯ ಕುರಿತು ದಿನಾಂಕ 18 ಮತ್ತು 19ನೇ ಮಾರ್ಚ 2019 ರಂದು ಜರುಗಲಿರುವ ರಾಷ್ಟ್ರಮಟ್ಟದ ವಿಚಾರ ಸಂಕಿರಣ ಹೊಸ ಶೋಧದ, ಚಿಂತನೆಗಳ ಹೊಳವುಗಳಿಗೆ ವೇದಿಕೆಯಾಗಲಿದೆ ಎಂದೆ ಆಶಿಸುತ್ತೇವೆ.

## ಸಮ್ಮೇಳನದ ವಿವಿಧ ಅಧಿವೇಶನಗಳು

ಕನ್ನಡದಲ್ಲಿ ಪಾಂಡಿತ್ಯಪೂರ್ಣ ಉಪನ್ಯಾಸಗಳನ್ನು ಖ್ಯಾತ ಸಂಪನ್ಮೂಲ ತಜ್ಞರುಗಳಿಂದ ಹಾಗೂ ಅಧ್ಯಾತ್ಮ ಗುರುಗಳಿಂದ ಈ ಕೆಳಕಂಡ ವಿಷಯಗಳ ಮೇಲೆ ವಿಚಾರಗೋಷ್ಠಿಗಳನ್ನು ಏರ್ಪಡಿಸಲಾಗುವುದು:

- ವಚನಗಳಲ್ಲಿ ಆದಿಭೌತ ವಿಜ್ಞಾನ
- ವಚನಗಳಲ್ಲಿ ಭೌತ ವಿಜ್ಞಾನ
- ವಚನಗಳಲ್ಲಿ ಜೀವ ವಿಜ್ಞಾನ
- ವಚನಗಳಲ್ಲಿ ವೈದ್ಯ ವಿಜ್ಞಾನ
- ವಚನಗಳಲ್ಲಿ ಗಣಿತ ವಿಜ್ಞಾನ
- ವಚನಗಳಲ್ಲಿ ಕೃಷಿ ವಿಜ್ಞಾನ
- ವಚನಗಳಲ್ಲಿ ಪರಿಸರ ವಿಜ್ಞಾನ
- ವಚನಗಳಲ್ಲಿ ವೈಜ್ಞಾನಿಕತೆ ಮತ್ತು ವೈಚಾರಿಕತೆ

## ಪ್ರಾತ್ಯಕ್ಷಿಕೆಗಳ ಪ್ರಸ್ತುತಿ

ಪ್ರತಿನಿಧಿಗಳು ತಮ್ಮ ಸಂಶೋಧನಾ ಫಲಿತಾಂಶವನ್ನು ಕನ್ನಡದಲ್ಲಿ ಪ್ರಾತಕ್ಷಿಕೆಗಳ ಮೂಲಕ ಪ್ರಸ್ತುತಪಡಿಸಲು ಸಮ್ಮೇಳನವು ಒಂದು ವೇದಿಕೆಯನ್ನು ಕಲ್ಪಿಸಿದೆ. ವಚನಗಳಲ್ಲಿ ಹುದುಗಿರುವ ವಿಜ್ಞಾನವನ್ನು ಅನಾವರಣಗೊಳಿಸುವ ಸಂಶೋಧನೆಗಳಿಗೆ/ ವಿಚಾರಗಳಿಗೆ ಪ್ರೋತ್ಸಾಹವನ್ನು ನೀಡುವ ಸಲುವಾಗಿ ಅತ್ಯುತ್ತಮ ಪ್ರಾತ್ಯಕ್ಷಿಕೆಗಳಿಗೆ ಬಹುಮಾನವನ್ನು ಕೆಳಕಂಡಂತೆ ನೀಡಲಾಗುವುದು.

ಪ್ರಥಮ ಬಹುಮಾನ – ರೂ. 5,000/–
ದ್ವಿತೀಯ ಬಹುಮಾನ – ರೂ. 3,000/–
ತೃತೀಯ ಬಹುಮಾನ – ರೂ. 2,000/–

ತಜ್ಞ ಸಮಿತಿಯು ಅತ್ಯುತ್ತಮವಾದ ಪ್ರಾತ್ಯಕ್ಷಿಕೆಗಳನ್ನು ಬಹುಮಾನಕ್ಕೆ ಆಯ್ಕೆ ಮಾಡಲಿದೆ.

## ವೈಜ್ಞಾನಿಕ ಪ್ರಾತ್ಯಕ್ಷಿಕೆಗಳನ್ನು ಸಲ್ಲಿಸಲು ಮಾನದಂಡ

ಅಧಿವೇಶನಕ್ಕೆ ಆಯ್ಕೆಯಾದ ಪ್ರಾತ್ಯಕ್ಷಿಕೆಗಳನ್ನು ಪ್ರದರ್ಶಿಸಲು ಸೂಕ್ತ ಸ್ಥಳಾವಕಾಶವನ್ನು ನೀಡಲಾಗುವುದು (ಪ್ರತಿ ಪ್ರಾತ್ಯಕ್ಷಿಕೆಗೆ 3 x 2 ½ ಅಡಿ ಜಾಗ).
ಸಮ್ಮೇಳನದ ಸಮಯದಲ್ಲಿ ಎಲ್ಲಾ ಪ್ರಾತ್ಯಕ್ಷಿಕೆಗಳನ್ನು ಮೊದಲ ಲೇಖಕರೇ ಪ್ರಸ್ತುತ ಪಡಿಸಬೇಕು.
ಒಬ್ಬ ಲೇಖಕರು ಒಂದೇ ಪ್ರಾತ್ಯಕ್ಷಿಕೆಯನ್ನು ಸಲ್ಲಿಸುವುದು. ತಜ್ಞರು ಆಯ್ಕೆ ಮಾಡಿದ ಪ್ರಾತ್ಯಕ್ಷಿಕೆಗಳನ್ನು 2019ರ ಮಾರ್ಚ 18 ರಂದು (ಸೋಮವಾರ) ಬೆಳಿಗ್ಗೆ 8.30ಕ್ಕೆ ನಿಗದಿಪಡಿಸಿದ ಸ್ಥಳದಲ್ಲಿ ಪ್ರದರ್ಶನಕ್ಕೆ ಇಡಲಾಗುವುದು.

ಸಮ್ಮೇಳನದ ಪ್ರತಿನಿಧಿಗಳು ಪ್ರಾತ್ಯಕ್ಷಿಕೆಗಳನ್ನು ಚಹಾ ವಿರಾಮ ಮತ್ತು ಭೋಜನ ವಿರಾಮ ಸಮಯದಲ್ಲಿ ವೀಕ್ಷಿಸಲು ಅನುವು ಮಾಡಿಕೊಡಬೇಕಾಗಿದ್ದು, ಈ ಸಮಯದಲ್ಲಿ ಲೇಖಕರು ತಮ್ಮ ಪ್ರಾತ್ಯಕ್ಷಿಕೆಯ ಬಳಿಯಿದ್ದು, ಪ್ರತಿನಿಧಿ– ಗಳೊಂದಿಗೆ ಚರ್ಚಿಸುವುದು.
ಪ್ರಾತ್ಯಕ್ಷಿಕೆಗಳನ್ನು 2019ರ ಮಾರ್ಚ 19 ರಂದು (ಮಂಗಳವಾರ) ಸಂಜೆ 5.00 ಗಂಟೆಗೆ ತೆಗೆಯಬಹುದಾಗಿದೆ.

## ಸಾರಾಂಶದ ಸಲ್ಲಿಕೆ ಮತ್ತು ಪ್ರಾತ್ಯಕ್ಷಿಕೆಗಳ ಪ್ರಸ್ತುತಿ

- ಪ್ರಾತ್ಯಕ್ಷಿಕೆಯ ಸಾರಾಂಶವನ್ನು ಕನ್ನಡದಲ್ಲಿ 750 ಪದಗಳಿಗೆ ಮೀರದಂತೆ ಸಲ್ಲಿಸುವುದು.
- ಸಾರಾಂಶವನ್ನು ನುಡಿ o5e ಅಕ್ಷರದಲ್ಲಿ ಬೆರಳಚ್ಚು ಮಾಡಿಸಿ, ಇ–ಅಂಚೆ ಮೂಲಕ vachan.drsc@gmail.com ಗೆ ಸಲ್ಲಿಸುವುದು.
- ಸಾರಾಂಶವನ್ನು ಸಲ್ಲಿಸಲು ಕೊನೆಯ ದಿನಾಂಕ **11ನೇ ಮಾರ್ಚ 2019 (ಸೋಮವಾರ)**
- ನಿಗದಿತ ದಿನಾಂಕದ ನಂತರ ಸಲ್ಲಿಸುವ ಸಾರಾಂಶಗಳನ್ನು ಪರಿಗಣಿಸಲಾಗುವುದಿಲ್ಲ. ಲೇಖಕರು ತಮ್ಮ ಅಂಚೆ ವಿಳಾಸ, ಇ–ಅಂಚೆ, ಫ್ಯಾಕ್ಸ್ ಮತ್ತು ಮೊಬೈಲ್ ಸಂಖ್ಯೆಗಳನ್ನು ನೀಡುವುದು.
- ಸಲ್ಲಿಕೆಯಾದ ವೈಜ್ಞಾನಿಕ ಸಾರಾಂಶಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಂತಿಮ ತೀರ್ಮಾನ ಆಯ್ಕೆ ಸಮಿತಿಯದ್ದಾಗಿರುತ್ತದೆ.
- ಈಗಾಗಲೇ ಪ್ರಕಟಿಸಿರುವ ಅಥವಾ ಬೇರೆಡೆ ಪ್ರಸ್ತುತ ಪಡಿಸಿರುವ ಅಥವಾ ಅಕಾಡೆಮಿಯ ಸಮ್ಮೇಳನಗಳಲ್ಲಿ ಬಹುಮಾನಿತ ಪ್ರಾತ್ಯಕ್ಷಿಕೆಗಳನ್ನು ಸಲ್ಲಿಸುವಂತಿಲ್ಲ.
- ಪ್ರಾತ್ಯಕ್ಷಿಕೆಯು ಯಾವುದೇ ರೀತಿಯ ನಕಲು ಎಂದು ಕಂಡು ಬಂದಲ್ಲಿ ಅನರ್ಹಗೊಳಿಸಲಾಗುವುದು.
- ಲೇಖಕರು ವೈಜ್ಞಾನಿಕ ಸಾರಾಂಶ/ ಪ್ರಾತ್ಯಕ್ಷಿಕೆ ಯಾವ ವಿಷಯದಡಿ ಬರುವುದೆಂಬುದನ್ನು ನಮೂದಿಸುವುದು.

ಪ್ರಾತ್ಯಕ್ಷಿಕೆಗಳನ್ನು ವಿಷಯ ತಜ್ಞರು ಸಂಶೋಧನೆ, ವಸ್ತುನಿಷ್ಠತೆ ಮತ್ತು ಪ್ರಸ್ತುತಿಯ ಗುಣಮಟ್ಟವನ್ನು ಆಧರಿಸಿ ಮೌಲ್ಯಮಾಪನ ಮಾಡಿ, ನಗದು ಬಹುಮಾನಕ್ಕೆ ಆಯ್ಕೆ ಮಾಡಲಿದ್ದಾರೆ. ಲೇಖಕರಿಂದ ವೈಜ್ಞಾನಿಕ ಸಾರಾಂಶ /ಪ್ರಾತ್ಯಕ್ಷಿಕೆ ಬೇರೆಲ್ಲೂ ಪ್ರಕಟಿಸಿಲ್ಲ ಎಂಬುದರ ಬಗ್ಗೆ ಸ್ವಯಂ ಪ್ರಮಾಣೀಕರಣ/ಸ್ವಯಂ ಘೋಷಣೆ ನೀಡಬೇಕಾಗುವುದು

## ನೋಂದಾವಣಿ

ಸಮ್ಮೇಳನದಲ್ಲಿ ಪ್ರತಿನಿಧಿಗಳಾಗಿ ಭಾಗವಹಿಸಲು ಇಚ್ಛಿಸುವವರು ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರದ ಅಂತರ್ಜಾಲ ತಾಣಗಳಲ್ಲಿ ಲಭ್ಯವಿರುವ ಅರ್ಜಿ ನಮೂನೆಯಲ್ಲಿ ಸಮುಚಿತ ಮಾರ್ಗವಾಗಿ ಸಲ್ಲಿಸತಕ್ಕದ್ದು. ನೋಂದಣಿ ಶುಲ್ಕ ರೂ. 400/– ಗಳನ್ನು (Director, Dharwad Regional Science Centre) ಇವರಿಗೆ DD ಮೂಲಕ ಅಥವಾ ಆನ್‌ಲೈನ್ SBI ಖಾತೆ ಸಂಖ್ಯೆ 32621859641 IFSC Code SBIN0001728 ಗೆ ಸಂದಾಯವಾಗುವಂತೆ ಭರಿಸಬೇಕು.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**
**ಡಾ. ಕೆ. ಬಿ. ಗುಡಸಿ**
ನಿರ್ದೇಶಕರು, ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ
ಕರ್ನಾಟಕ ವಿಶ್ವವಿದ್ಯಾಲಯ ಆವರಣ, ಪಾವಟೆನಗರ, ಧಾರವಾಡ–580003
ಇ–ಮೇಲ್: drscs.kud@gmail.com / vachan.drsc@gmail.com
ವೆಬ್‌ಸೈಟ್: dharwadsciencecentre.org
ದೂ: 0836–2215482 ಮೊಬೈಲ್: 9448571368

**ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ, ಧಾರವಾಡ**
ಕರ್ನಾಟಕ ವಿಶ್ವವಿದ್ಯಾಲಯ ಆವರಣ, ಧಾರವಾಡ–580003
ವೆಬ್‌ಸೈಟ್ : www.dharwadsciencecentre.org,
ಇಮೇಲ್ : vachan.drsc@gmail.com
ಹಾಗೂ
**ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ**
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರಕಾರ,
ವಿಜ್ಞಾನ ಭವನ, 24/2, 2ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು–560070

ಇವರ ಸಹಯೋಗದೊಂದಿಗೆ

# ರಾಷ್ಟ್ರ ಮಟ್ಟದ ವಿಚಾರ ಸಂಕಿರಣ

## ವಿಷಯ: ವಚನಗಳಲ್ಲಿ ವಿಜ್ಞಾನ ಮತ್ತು ವೈಜ್ಞಾನಿಕತೆ

(ಶರಣರ, ಸರ್ವಜ್ಞ, ವೇಮ ಮತ್ತು ಇತರರ ವಚನಗಳನ್ನು ಅನುಲಕ್ಷಿಸಿ)

ದಿನಾಂಕ: 18 ಮತ್ತು 19ನೇ ಮಾರ್ಚ 2019
(ಸೋಮವಾರ ಮತ್ತು ಮಂಗಳವಾರ)

ಸ್ಥಳ :
ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ
ಕರ್ನಾಟಕ ವಿಶ್ವವಿದ್ಯಾಲಯ, ಪಾವಟೆನಗರ, ಧಾರವಾಡ



## ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ

ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ರಾಷ್ಟ್ರೀಯ ವಿಜ್ಞಾನ ಮತ್ತು ವಸ್ತು ಸಂಗ್ರಹಾಲಯ ಸಂಸ್ಥೆ ಮತ್ತು ಕರ್ನಾಟಕ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗಳ ಸಹಯೋಗದೊಂದಿಗೆ 27ನೇ ಫೆಬ್ರುವರಿ 2012 ರಂದು ಸ್ಥಾಪಿಸಲಾಗಿದ್ದು, ಇದರ ಮೂಲಕ ಜನಸಾಮಾನ್ಯರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಮೂಲ ವಿಜ್ಞಾನ ಮತ್ತು ವೈಜ್ಞಾನಿಕ ಮನೋವೃತ್ತಿಯನ್ನು ಬೆಳೆಸಲು ಸಹಕಾರಿಯಾಗಿದೆ. ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಜನಸಾಮಾನ್ಯರಿಗೆ ಅನೇಕ ವೈಜ್ಞಾನಿಕ ಕಾರ್ಯಕ್ರಮಗಳನ್ನು ಆಯೋಜಿಸಿ ವೈಜ್ಞಾನಿಕ ಮನೋಭಾವವನ್ನು ಬೆಳೆಸಲು ಪ್ರಮುಖ ಪಾತ್ರವಹಿಸಿದೆ. ಜೊತೆಗೆ ಪ್ರೌಢಶಾಲೆಗಳಿಗೆ ವಿಜ್ಞಾನ ಕಿಟ್ ತಯಾರಿಕೆ ಮತ್ತು ಪೂರೈಕೆ, ವಿಜ್ಞಾನ ಪಾರ್ಕ್ ಪ್ರದರ್ಶಿಕೆಗಳ ತಯಾರಿಕೆ ಮತ್ತು ಸ್ಥಾಪನೆ, ಶಿಕ್ಷಕರಿಗೆ ತರಬೇತಿ, ಮಕ್ಕಳಿಗೆ ತರಬೇತಿ, ಕಮ್ಮಟ ಇತ್ಯಾದಿ ಕಾರ್ಯಗಳನ್ನು ಮಾಡುತ್ತ ಉತ್ತರ ಕರ್ನಾಟಕದ ಅನೇಕ ಶೈಕ್ಷಣಿಕ ಸಮಸ್ಯೆಗಳನ್ನು ಹೋಗಲಾಡಿಸಲು ವೈಜ್ಞಾನಿಕವಾಗಿ ಚಿಂತನೆಗೆ ಅವಕಾಶ ನೀಡುತ್ತಿದೆ. ಎಲ್ಲ ಪ್ರೌಢಶಾಲೆಗಳನ್ನು ಸದೃಢಗೊಳಿಸಲು ಪ್ರಯತ್ನಿಸುತ್ತಿದೆ. ಮುಂದಿನ ದಿನಗಳಲ್ಲಿ 3ಡಿ ಡಿಜಿಟಲ್ ಪ್ಲಾನಿಟೇರಿಯಮ್, ಇನ್ನೋವೇಶನ್ ಹಬ್ ಅಂತಹ ಮಹತ್ವಾಕಾಂಕ್ಷಿ ಯೋಜನೆಗಳನ್ನು ಹಮ್ಮಿಕೊಳ್ಳುತ್ತಿರುವುದು ವಿಶೇಷ.

**ಪ್ರದರ್ಶಿಕೆಗಳು, ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳು:**

### ನಮ್ಮ ವಿಜ್ಞಾನ ಮತ್ತು ತಂತ್ರಜ್ಞಾನ ಪರಂಪರೆ

ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಗೆ ನಮ್ಮ ಪ್ರಾಚೀನ ಭಾರತೀಯರು ನೀಡಿದ ಕೊಡುಗೆಯನ್ನು ಈ ಪ್ರದರ್ಶನಾಲಯದಲ್ಲಿ ಅನಾವರಣಗೊಳಿಸಲಾಗಿದೆ. ವಿಜ್ಞಾನ ಕೇಂದ್ರದ ಪ್ರಸಾದನಾ ವಿಧಾನ ಮತ್ತು ಮಾದರಿ ವಸ್ತು ಸಂಗ್ರಹಾಲಯ ಎರಡನ್ನೂ ಮೇಳೈಸಿ, 660 ಚದರ ಮೀಟರಿನಲ್ಲಿ ಹರಡಿದ ಈ ಪ್ರದರ್ಶನಾಲಯದಲ್ಲಿ ಭಾರತೀಯ ವಿಜ್ಞಾನ ಮತ್ತು ತಂತ್ರಜ್ಞಾನದ ಪರಂಪರೆಯನ್ನು ಅನಾವರಣ ಮಾಡಲಾಗಿದೆ. ಈ ಪ್ರದರ್ಶನಾಲಯದಲ್ಲಿ ದೆಹಲಿಯ ಕಬ್ಬಿಣದ ಸ್ತಂಭ, ಕೋನಾರ್ಕ್ ದೇವಾಲಯದ ಚಕ್ರ, ಹಂಪಿಯ ಕಲ್ಲಿನ ರಥದ ಪ್ರತಿಕೃತಿಯೂ ಇವೆ. ಹರಪ್ಪನವರ ಪಾರಂಪರಿಕ ಸಂಸ್ಕೃತಿ ಮತ್ತು ತಂತ್ರಜ್ಞಾನದ ಅನಾವರಣ ವಿಭಾಗವು ಒಂದು ಪ್ರಮುಖ ಆಕರ್ಷಣೆಯಾಗಿದೆ.

### ಜೀವಯಾಂತ್ರಿಕ

ದಶಲಕ್ಷಕ್ಕೂ ಹೆಚ್ಚು ವರ್ಷಗಳ ನಿರಂತರ ಪ್ರಯತ್ನದಿಂದ, ಯತ್ನಚ್ಯುತಿ ವಿಧಾನದಿಂದ ನಿಸರ್ಗದಲ್ಲಿ ಯಂತ್ರಗಳು ಈಗಿನ ರೂಪ ಪಡೆದಿವೆ. ನಿಸರ್ಗದ ನಿಗೂಢತೆಯನ್ನು ಅರಿಯಲು ಮಾನವ ನಿರಂತರ ಅಧ್ಯಯನ ಮಾಡುತ್ತಾ ನೈಸರ್ಗಿಕ ವಿಕಾಸದ ಬಗ್ಗೆ ಅರಿತುಕೊಂಡ. ಜೀವಯಾಂತ್ರಿಕ ಪ್ರದರ್ಶನಾಲಯವು ಕುತೂಹಲದಾಯಕ ಜೀವಯಂತ್ರ ಪ್ರಪಂಚಕ್ಕೆ ತಮ್ಮನ್ನು ಕೊಂಡೊಯ್ಯುತ್ತವೆ. ನಿಸರ್ಗದಲ್ಲಿ ಕೆಳದರ್ಜೆಯ ಜೀವಿಯಿಂದ ಮೇಲ್ದರ್ಜೆಯ ಜೀವಿಗಳ ವಿಕಾಸವಾದುದನ್ನು ಮಾನವ ನಿರ್ಮಿತ ಉಪಕರಣಗಳಲ್ಲಿ ಅನುಕರಣೆಯಾದ ಬಗ್ಗೆ ತುಲನಾತ್ಮಕ ಪರಿಚಯವನ್ನು ಮಾಡಿ ತೋರಿಸುವ ಪ್ರಯತ್ನ ಮಾಡಲಾಗಿದೆ.

### ಮೋಜಿನ ವಿಜ್ಞಾನ

ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರದ ಹೆಗ್ಗುರುತೆಂದರೆ ಮೋಜಿನ ವಿಜ್ಞಾನ ಪ್ರದರ್ಶನಾಲಯ. ಈ ಪ್ರದರ್ಶನಾಲಯದಲ್ಲಿ ವೀಕ್ಷಕರ ಆಸಕ್ತಿಯನ್ನು ಕೆರಳಿಸಬಲ್ಲ ಕ್ರಿಯಾತ್ಮಕ ಪ್ರದರ್ಶಿಕೆಗಳಿವೆ. ಅವು ವೀಕ್ಷಕರ ಮನೋರಂಜಿಸುವುದರ ಮೂಲಕ ವಿಜ್ಞಾನ ಕಲಿಕೆಗೆ ಪ್ರೇರಣೆ ನೀಡುತ್ತವೆ. ಇಲ್ಲಿರುವ ಪ್ರದರ್ಶಿಕೆಗಳೆಲ್ಲ ಕ್ರಿಯಾತ್ಮಕವಾಗಿದ್ದು, ಆಟವಾಡುತ್ತಾ, ಅನ್ವೇಷಣೆ ಮಾಡುತ್ತಾ, ಉಲ್ಲಾಸದಿಂದ ವಿಜ್ಞಾನದ ವಿವಿಧ ವಿಷಯಗಳನ್ನು ಮನವರಿಕೆ ಮಾಡಿಕೊಳ್ಳಲು ಸಹಕಾರಿಯಾಗಿವೆ. ನಮ್ಮೆಲ್ಲರಲ್ಲಿ ಅಡಗಿರುವ ಸೃಜನಾತ್ಮಕ ಮನಸ್ಸಿಗೆ ಅನ್ವೇಷಣೆ ಮಾಡುವ ಪ್ರೇರಣೆ ನೀಡುವಲ್ಲಿ ಇವು ಮಹತ್ತರ ಪಾತ್ರ ವಹಿಸಲಿವೆ.

### ವಿಜ್ಞಾನ ಉದ್ಯಾನವನ

ವಿಜ್ಞಾನ ಕೇಂದ್ರದ ಸುತ್ತಲೂ 8 ಎಕರೆ ಜಾಗದಲ್ಲಿ ಹಸಿರಿನಿಂದ ಕಂಗೊಳಿಸುತ್ತಿರುವ ಉದ್ಯಾನವನ್ನು ನಿರ್ಮಿಸಲಾಗಿದೆ. ಇದರಲ್ಲಿ ಗುರುತ್ವ, ಆಪ್ಟಿಕ್ಸ್, ಸನ್ನೆಗಳು, ರಾಟೆಗಳು, ದೃಷ್ಟಿಭ್ರಮೆ, ಪ್ರತಿಧ್ವನಿ ಕೊಳವೆ, ಉಯ್ಯಾಲೆಗಳೂ ಲೋಲಕವೇ ಎಂದು ತಿಳಿಸಬಲ್ಲ ಪ್ರದರ್ಶಿಕೆಗಳಲ್ಲದೆ ಕ್ರಿಯಾತ್ಮಕವಾದ, ವೀಕ್ಷಕರ ಆಸಕ್ತಿಯನ್ನು ಕೆರಳಿಸಬಲ್ಲ 43 ಪ್ರದರ್ಶಿಕೆಗಳಿವೆ.

### ತ್ರಿ ಆಯಾಮದ ಚಲನ ಚಿತ್ರಮಂದಿರ

ವಿಶೇಷವಾದ ಡಿಜಿಟಲ್ ತಂತ್ರಜ್ಞಾನ ಮತ್ತು ಪೋಲರಾಯ್ಡ್ ಕನ್ನಡಕಗಳಿಂದ ವೀಡಿಯೋ ಚಿತ್ರಗಳನ್ನು ಮೂರು ಆಯಾಮದಲ್ಲಿ ವೀಕ್ಷಿಸಲು ಸಾಧ್ಯವಾಗಿದೆ. ತ್ರಿ ಆಯಾಮದ ಡಿಜಿಟಲ್ ತಂತ್ರಜ್ಞಾನ ಪ್ರತಿಬಿಂಬಗಳನ್ನು ನೈಜವಾಗಿ ತೋರಿಸುವುದಲ್ಲದೇ ಅವಕ್ಕೆ ಜೀವ ತುಂಬಿಸಬಲ್ಲವು. ಈ ಥಿಯೇಟರಿನಲ್ಲಿ ಪೋಲರೈಸ್ಡ್ ಸ್ಟೀರಿಯೋ ಪ್ರೊಜಕ್ಷನ್ನಿನ ಮೂಲಕ ಪರದೆಯ ಮೇಲೆ ಕಾಣುವ ಡಿಜಿಟಲ್ ಬಿಂಬವನ್ನು ಮೂರು ಆಯಾಮದಲ್ಲಿ ನೋಡುವುದು ಸಾಧ್ಯವಾಗಿದೆ. ವೀಕ್ಷಕರಿಗೆ ಮೈನವಿರೇಳಿಸುವ ಅನುಭವವನ್ನು ಇಲ್ಲಿ ತೋರಿಸುವ ಪ್ರದರ್ಶನಗಳು ನೀಡಲಿವೆ.

### ಇಲ್ಲಿರುವ ಇತರೆ ಸೌಲಭ್ಯಗಳು

- **ತಾರಾಮಂಡಲ:–** ಇದು ಗಾಳಿ ತುಂಬಿಸಿ ಉಬ್ಬಿಸಬಹುದಾದ ಪ್ಲಾನಿಟೇರಿಯಂ. ಏಕಕಾಲಕ್ಕೆ 30 ಜನ ವೀಕ್ಷಕರು ಇದರಲ್ಲಿ ಕುಳಿತು ಖಗೋಳದ ಪರಿಚಯ ಮಾಡಿಕೊಳ್ಳಬಹುದು.
- **ವಿಜ್ಞಾನ ಪ್ರಾತ್ಯಕ್ಷಿಕೆ ಕೊಠಡಿ:–** ವಿಜ್ಞಾನ ಕೇಂದ್ರಕ್ಕೆ ಬರುವ ವೀಕ್ಷಕರಿಗೆ ಹಲವಾರು ಪ್ರಯೋಗಗಳನ್ನು ಪ್ರಾತ್ಯಕ್ಷಿಕೆಗಳ ಮೂಲಕ ತೋರಿಸಲಾಗುತ್ತದೆ. ಈ ಪ್ರಾತ್ಯಕ್ಷಿಕೆಗಳು ಅವರನ್ನು ವಿಜ್ಞಾನ ಕಲಿಕೆಯತ್ತ ಆಕರ್ಷಿಸಬಲ್ಲವು.

### ಕೇಂದ್ರದ ಕಾರ್ಯ ಚಟುವಟಿಕೆಗಳು

- Scientific Spark ವಿದ್ಯಾರ್ಥಿಗಳಿಗೆ ಪ್ರಯೋಗಾಧಾರಿತ ರಜಾ ದಿನದ ತರಬೇತಿಗಳು.
  Science Mind ವಿದ್ಯಾರ್ಥಿಗಳಿಗೆ ಪ್ರತಿ ರವಿವಾರ ಪ್ರಯೋಗಾಧಾರಿತ ವಿಶೇಷ ತರಗತಿಗಳ ಆಯೋಜನೆ.
- ಪ್ರೌಢಶಾಲೆಗಳಿಗೆ ಪ್ರಯೋಗಾಲಯ ಪರಿಕರಗಳ ಕಿಟ್ ತಯಾರಿಕೆ ಮತ್ತು ವಿತರಣೆ.
- ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ದಿನಾಚರಣೆಗಳ ಕಾರ್ಯಕ್ರಮಗಳನ್ನು ಆಚರಿಸಿ ಅದರ ನಿಮಿತ್ಯ ಸ್ಪರ್ಧೆಗಳಾದ ಚಿತ್ರಕಲೆ, ರಸಪ್ರಶ್ನೆ, ಚರ್ಚಾಸ್ಪರ್ಧೆ, ಸೆಮಿನಾರ, ಪ್ರಬಂಧ ಇತ್ಯಾದಿಗಳನ್ನು ಏರ್ಪಡಿಸುವುದು.
- ಕನ್ನಡದಲ್ಲಿ ವಿಜ್ಞಾನ ಲೇಖನ ಕಮ್ಮಟಗಳನ್ನು ನಡೆಸುವುದು.
- ಆರೋಗ್ಯ ತಪಾಸಣಾ ಶಿಬಿರಗಳ ಆಯೋಜನೆ.
- ಖಗೋಳಿಯ ಘಟನೆಗಳ ವೀಕ್ಷಣೆ.
- ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮಹತ್ವದ ದಿನಾಚರಣೆಗಳ ಆಯೋಜನೆ ಹಾಗೂ ವಿವಿದ ಸ್ಪರ್ಧೆಗಳನ್ನು ಆಯೋಜಿಸಿ ಆ ದಿನದ ಮಹತ್ವವನ್ನು ಸಾರುವುದು..
- ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಸಮ್ಮೇಳನಗಳಲ್ಲಿ ಕೇಂದ್ರದ ಪ್ರದರ್ಶಿಕೆಗಳೊಂದಿಗೆ ಭಾಗವಹಿಸುವುದು.
- ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನ.
- ವಿಶೇಷ ಉಪನ್ಯಾಸಗಳು, ಕಾರ್ಯಾಗಾರಗಳು, ವಿಚಾರ ಸಂಕೀರ್ಣಗಳು ಹಾಗೂ ಸಮ್ಮೇಳನಗಳ ಆಚೋಜನೆ.
- ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ವಿಷಯಾಧಾರಿತ ತರಬೇತಿ ಕಾರ್ಯಾಗಾರಗಳ ಆಯೋಜನೆ.
- ವಿಜ್ಞಾನ ಮೇಳ ಆಯೋಜನೆ.
- ವಿದ್ಯಾರ್ಥಿಗಳಿಗೆ ವಸ್ತು ಪ್ರದರ್ಶನ ಆಚೋಜನೆ.
- ಪರಿಸರ ಸಂರಕ್ಷಣೆಗೆ ವಿದ್ಯಾರ್ಥಿಗಳಿಂದ ಸಾರ್ವಜನಿಕ ರ್‍ಯಾಲಿಗಳನ್ನು ಆಯೋಜಿಸುವುದು.
- ನಾಟಕವು ಒಂದು ಪ್ರಭಾವಿ ಮಾಧ್ಯಮವಾಗಿದ್ದು, ವಿಜ್ಞಾನವನ್ನು ಜನಪ್ರೀಯಗೊಳಿಸಲು, ವೈಜ್ಞಾನಿಕ ಮನೋಭಾವವನ್ನು ಬೆಳೆಸಲು, ಬೆಳಗಾವಿ ಕಂದಾಯ ವಿಭಾಗದ ಎಲ್ಲ 7 ಜಿಲ್ಲೆಗಳಲ್ಲಿ ಪದವಿ ವಿದ್ಯಾರ್ಥಿಗಳಿಗೆ ಹಾಗೂ ವಿಭಾಗ ಮಟ್ಟದದಲ್ಲಿ ಪದವಿ ವಿದ್ಯಾರ್ಥಿಗಳಿಗೆ ವಿಜ್ಞಾನ ನಾಟಕ ಸ್ಪರ್ಧೆಯನ್ನು ನೂತನವಾಗಿ ಪ್ರಾರಂಭಿಸಲಾಗಿದೆ.
- ವಿಜ್ಞಾನ ಮತ್ತು ತಂತ್ರಜ್ಞಾನಗಳಲ್ಲಿ ಆಗುತ್ತಿರುವ ಸಂಶೋಧನೆಗಳ ಬಗ್ಗೆ ವಿದ್ಯಾರ್ಥಿ, ಶಿಕ್ಷಕರು ಹಾಗೂ ಜನಸಾಮಾನ್ಯರಲ್ಲಿ ಅರಿವು ಮೂಡುಸುವುದು. ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಮೂಡಿಸುವ ಉದ್ದೇಶದಿಂದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು ಇವರ ಸಹಯೋಗದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನವನ್ನು ಕನ್ನಡದಲ್ಲಿ ಆಯೋಜಿಸಲಾಗಿತ್ತು.

ಈ ಕೇಂದ್ರವು ಧಾರವಾಡದಲ್ಲಿ ಎಲ್ಲರೂ ನೋಡಲೇ ಬೇಕಾದ ಒಂದು ಪ್ರವಾಸ ತಾಣವಾಗಿ ಹೊರ ಹೊಮ್ಮುತ್ತಿದೆ.

## ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿಯು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿಯಲ್ಲಿ ಸ್ಥಾಪಿತವಾಗಿರುವ ಸ್ವಾಯತ್ತ ನೋಡಲ್ ಸಂಸ್ಥೆಯಾಗಿದೆ. ಈ ಸಂಸ್ಥೆಯು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ನೀತಿ ನಿರೂಪಣೆ ಮತ್ತು ಉಪಕ್ರಮಗಳ ರಚನೆ ಹಾಗೂ ಅನುಷ್ಠಾನದ ನೆರವಿನ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುವುದಲ್ಲದೇ, ರಾಜ್ಯಾದ್ಯಂತ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯಕ್ರಮಗಳ ಅನುದಾನ ಹಂಚಿಕೆ ಮಾಡುವುದಾಗಿದೆ. ಅಲ್ಲದೇ, ವೈಜ್ಞಾನಿಕ ವಿಷಯಗಳಿಗೆ ಸಂಬಂಧಿಸಿದ ಉತ್ತಮ ಯೋಜನೆಗಳನ್ನುರೂಪಿಸುವುದು ಹಾಗೂ ಅವುಗಳ ಉಸ್ತುವಾರಿ, ನಿರ್ವಹಣೆ ಮತ್ತು ಮೌಲ್ಯಮಾಪನ ಮಾಡುವುದಾಗಿರುತ್ತದೆ.

**ಧ್ಯೇಯೋದ್ದೇಶಗಳು:**

- ವಿಜ್ಞಾನ ಮತ್ತು ತಂತ್ರಜ್ಞಾನ ಬೆಳವಣಿಗೆಗಳನ್ನು ಜನಸಾಮಾನ್ಯರಿಗೆ ಪರಿಚಯಿಸುವುದು ಹಾಗೂ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಅರಿವು ಮತ್ತು ಚಿಂತನೆ ಬೆಳೆಸುವುದು.
- ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳ ಅಭಿವೃದ್ಧಿಗೆ ಬೆಂಬಲಿಸುವುದು.
- ವಿಜ್ಞಾನ ಮತ್ತು ತಂತ್ರಜ್ಞಾನ ಶಿಕ್ಷಣ ಹಾಗೂ ಸಾಮರ್ಥ್ಯ ಬಲವರ್ಧನೆಗೆ ಪ್ರೋತ್ಸಾಹಿಸುವುದು.
- ಸಂಶೋಧನಾ ಮತ್ತು ಅಭಿವೃದ್ಧಿಗೆ ನೆರವು ಹಾಗೂ ಯುವ ಸಂಶೋಧಕರಿಗೆ ಉತ್ತೇಜನ.
- ನ್ಯಾನೋ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಪ್ರೋತ್ಸಾಹ.
- ವಿಜ್ಞಾನ ಮತ್ತು ತಂತ್ರಜ್ಞಾನ ಆಧಾರಿತ ಜನಸಮೂಹ ಕಾರ್ಯಕ್ರಮಗಳ ಆಯೋಜನೆ.

## ವಚನಗಳಲ್ಲಿ ವಿಜ್ಞಾನ ಮತ್ತು ವೈಜ್ಞಾನಿಕತೆ ವಿಚಾರ ಸಂಕಿರಣ

ವಚನಕಾರರು ಭಾವನೆಗಳನ್ನು ಕಲಾತ್ಮಕಗೊಳಿಸಲು ಹೊರಟ ಕವಿಗಳಲ್ಲ, ಬದುಕನ್ನು ಕಲಾತ್ಮಕಗೊಳಿಸಲು ಹೋರಾಡಿದ ಮಹಾನ್ ಸಂತರು. ಈ ಉತ್ಕಟವಾದ ಹೋರಾಟದ ಉಪನಿಷ್ಪತ್ತಿಯ ಪ್ರತೀಕವೇ ವಚನ ಸಾಹಿತ್ಯದ ಸೃಷ್ಟಿ. ಇವರ ವಚನಗಳ ಮೂಲ ಆಶಯ ಸಾಹಿತ್ಯ ಸಾಧನೆಯಲ್ಲ, ಜೀವನ ಶೋಧನೆ. ಜೀವನಕ್ಕಾಗಿ ಅವರು ಸಾಹಿತ್ಯವನ್ನು ಅವಲಂಬಿಸಿದವರು. ವ್ಯಷ್ಟಿ ಜೀವನದಂತೆ ಸಮಷ್ಟಿ ಜೀವನದ ಒಳಿತನ್ನೂ ಅವರ ತೀವ್ರವಾದ ಅಭೀಪ್ಸೆ ಒಳಗೊಂಡಿತ್ತು. ಸಂಪ್ರದಾಯದ ಮತ್ತು ಪರಂಪರೆಯ ಜೀವಸತ್ವವನ್ನು ಅರಗಿಸಿಕೊಂಡು, ಸಾರ್ವಕಾಲಿಕ ಸತ್ಯವಾದ ವೈಜ್ಞಾನಿಕ ಮೌಲ್ಯಗಳ ಮೇಲೆ ಮಾನವ ಧರ್ಮದ ಸೌಧವನ್ನು ನಿರ್ಮಿಸಲು ಹವಣಿಸಿದರು. ಸಂಪ್ರದಾಯದ ಮತಿಯ ಪರಿಮಿತಿಯನ್ನೂ ಮೀರಿ, ವೈಚಾರಿಕ ನೆಲೆಗಟ್ಟಿನ ಮೇಲೆ ಸಾರ್ವಕಾಲಿಕವಾದ ವಿಶ್ವಮಾನವ ಪ್ರಜ್ಞೆಯ ಅರಿವು ಮೂಡಿಸಿದವರು. ಅವರು ಆಲೋಚಿಸಿದುದು ವಿಶ್ವಮಾನವರಾಗಿ, ವಿಶ್ವಮಾನವರಿಗಾಗಿ.. ! ಹಾಗೆಂದು ನಿಂತ ನೆಲವನ್ನು ಬಿಟ್ಟು ಆಕಾಶದಲ್ಲಿ ವಿಹರಿಸುವ ಆದರ್ಶವಾದಿಗಳಾಗಲಿಲ್ಲ. ಈ ಮಣ್ಣಿನ ಮಕ್ಕಳಾಗಿ, ಈ ಮಣ್ಣಿನಲ್ಲಿ ಬೆಳೆದು, ಈ ಮಣ್ಣನ್ನೇ ಹೊನ್ನಾಗಿಸಿದವರು. ಹಳೆಯ ಕೊಳೆಯನ್ನು ನಿರ್ದಾಕ್ಷಿಣ್ಯವಾಗಿ ಕತ್ತರಿಸಿಹಾಕಿ ಅದೇ ಗೊಬ್ಬರದಿಂದ ಬಯಸಿ ಬಂದವರಿಗೆಲ್ಲ ಹೊಸ ಬೆಳೆಯ ಅಮೃತದ ಸುಧೆಯನ್ನಿತ್ತವರು. ಜಗತ್ತಿನ ಯಾವುದೇ ಕ್ರಾಂತಿಯ ಪರಮ ಗಂತವ್ಯವೆಂದರೆ ಇದೆ. ಸಮಷ್ಟಿ ಜೀವನದ ಉತ್ಥಾನ. ಇದನ್ನು ವೈಚಾರಿಕ ನಿಲುವಿನಲ್ಲಿ ಶರಣರು ಸಾಧಿಸಿದ ರೀತಿ ಜಾಗತಿಕ ಧರ್ಮದ ಇತಿಹಾಸದಲ್ಲಿಯೇ ಅನ್ಯಾದೃಶ್ಯವಾದುದು.

'ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ' ಎಂದ ಕೇಳುವ ಬಸವಣ್ಣನವರ ಮಾತಾಗಲಿ, 'ಅಜ್ಞಾನವೆಂಬ ತೊಟ್ಟಿಲೊಳಗೆ ಜ್ಞಾನವೆಂಬ ಶಿಸುವ ಮಲಗಿಸಿ' ಎಂದು ಕೇಳುವ ಅಲ್ಲಮನ ಮಾತುಗಳನ್ನು ಪರಿಭಾವಿಸಿದಾಗ, ವಚನಕಾರರು ಸಾಹಿತ್ಯದ ಪರೀಧಿಯಲ್ಲೇ ಮನೋವಿಜ್ಞಾನಿಗಳಾಗಿ, ಆದಿಭೌತ ವಿಜ್ಞಾನಿಗಳಾಗಿ, ಜೀವ ವಿಜ್ಞಾನಿಗಳಾಗಿ, ವೈದ್ಯ, ಗಣಿತ, ಖಗೋಲ, ಕೃಷಿ, ವಿಜ್ಞಾನಿಗಳಾಗಿ ತೋರಿದುದು ಅಚ್ಚರಿಯನ್ನುಂಟುಮಾಡುತ್ತದೆ. ಈ ಎಲ್ಲ ಮೌಲ್ಯ ವಿವೇಚನೆಯ ಉದ್ದಕ್ಕೂ ಆಚಾರ ವಿಚಾರಗಳ ಈ ಸಮನ್ವಯ ನಿಷ್ಠೆ ಅಚಲವಾಗಿ ಕಂಡುಬರುತ್ತದೆ. ವಿಚಾರಗಳ ನಿಲುವಿನಲ್ಲಿ ಬಹಳ ಅದ್ಭುತವಾಗಿದ್ದರೂ ಆಚಾರದಲ್ಲಿಳಿದು ಜನತೆಯನ್ನು ಮುಟ್ಟದೇ ಹೋದಾಗ, ಅದು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತದೆ. ಹಾಗೆಯೇ ವಿಚಾರಗಳ ಬೆಂಬಲವಿಲ್ಲದೇ ಆಚಾರಗಳು, ಕೇವಲ ಯಾಂತ್ರಿಕವಾಗಿ, ಆಡಂಬರವಾಗಿ ಶೋಷಣೆಯ ಸಾಧನಗಳಾಗುತ್ತವೆ. ಇದನ್ನು ಮನಗಂಡ ಶರಣರು, ಇವುಗಳ ಅವಿನಾಸಂಬಧವನ್ನು ತಮ್ಮ ಮೌಲ್ಯವಿವೇಚನೆಯ ಉದ್ದಕ್ಕೂ ಎತ್ತಿ ಹಿಡಿದರು. ಇವುಗಳಲ್ಲಿ ಯಾವೊಂದು ಕೊರತೆಯಾದರೂ ಅಷ್ಟರ ಮಟ್ಟಿಗೆ ಆಚರಗಳಾಗಲಿ ವಿಚಾರಗಳಾಗಲಿ ಕುಂಟುತ್ತವೆ. ಇಲ್ಲವೇ ಕುರುಡಾಗುತ್ತವೆ. ಈ ಮಾತನ್ನು ಇನ್ನೂ ವ್ಯಾಪಕವಾಗಿ ಆಧುನಿಕ ಪರಿಭಾಷೆಯಲ್ಲಿ ವಿಜ್ಞಾನಿ ಐನ್‌ಸ್ಟೈನ್ ಹೇಳುವಂತೆ 'Science without religion is blind, religion without science is lame'